**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**

**<u>ಸಿ. ಸಿ. ನಂ. 850/2023</u>**

ಸಿಡಬ್ಲ್ಯೂ-03
ಪಿಡಬ್ಲ್ಯೂ-02

| | |
|---|---|
| ಸಾಕ್ಷಿದಾರರ ಹೆಸರು | ಶಿವರಾಜ ಗಡ್ಡದ |
| ತಂದೆಯ ಹೆಸರು | ಮಂಜಪ್ಪ |
| ವಯಸ್ಸು | 26 ವರ್ಷ |
| ಉದ್ಯೋಗ | ವ್ಯವಹಾರ |
| ವಾಸ ಸ್ಥಳ | ಬಸಾಪುರ ಗ್ರಾಮ |

**ದಿನಾಂಕ : 13-08-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

1. ನನಗೆ ಚಾಸಾ-1 ಮತ್ತು 2 ರವರ ಪರಿಚಯ ಇದೆ. ಸಾಕ್ಷಿಯು ಘಟನಾ ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸುಮಾರು ಒಂದು ವರ್ಷ ಮೇಲ್ಪಟ್ಟು ಚಾಸಾ-1 ರವರ ಮನೆಯ ಹತ್ತಿರ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಇರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಪಂಚನಾಮೆ ಸಮಯದಲ್ಲಿ ಹಾಜರು ಇರಲಿಲ್ಲ ಮತ್ತು ಕಡೆಯ ಹಂತದಲ್ಲಿ ಚಾಸಾ-1 ರವರ ಮನೆಯ ಹತ್ತಿರ ಹೋಗಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಕೊಂಡಿರುವುದಿಲ್ಲ. ಪಂಚನಾಮೆಯಲ್ಲಿ ಇರುವ ಸಂಗತಿಗಳ ಬಗ್ಗೆ ಪೊಲೀಸರು ಓದಿ ತಿಳಿಸಿರುವುದಿಲ್ಲ. ಸಾಕ್ಷಿಯು ಒಂದು ಛಾಯಾ ಚಿತ್ರವನ್ನು ನೋಡುತ್ತಿದ್ದು, ಅದರಲ್ಲಿ

ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯಾ ಚಿತ್ರವನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದೆ. ಸದರಿ ಫೋಟೋವನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಪೊಲೀಸರು ಜಗಳದ ಬಗ್ಗೆ ತೆಗೆದುಕೊಳ್ಳುತ್ತಿದ್ದೇವೆ ಎಂದು ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

-

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

1. ದಿಃ 31-03-2023 ರಂದು ಬೆಳಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯ ಅವಧಿಯಲ್ಲಿ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಬರೆದಿರುತ್ತರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಬರೆಯಲು ನಾನ ಮತ್ತು ಚಾಸಾ- ರವರು ಪೊಲೀಸರಿಗೆ ಮಾಹಿತಿ ನೀಡಿರುತ್ತೇವೆ ಎಂದರೆ ಸಾಕ್ಷಿಯು ಪಂಚನಾಮೆ ಸಮಯದಲ್ಲಿ ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆ ಸುಯದಲ್ಲಿ ನನ್ನ ಸಮಕ್ಷಮ ಮು ಮಾ 1 ರ ಬಡಿಗೆಯನ್ನು ಪೊಲೀಸರು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜಗಳಕ್ಕೆ ಸಂಬಂಧಿಸಿದಂತೆ ಪೊಲೀಸರು ನಿ.ಪಿ-3 ರಂತೆ ಛಾಯಾ ಚಿತ್ರವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಛಾಯಾ ಚಿತ್ರ ತೆಗೆದುಕೊಂಡಿರುವುದು ನಿಜವಿದ್ದು, ಆದರೆ ಯಾವ ಕಾರಣಕ್ಕೆ ತೆಗೆದುಕೊಂಡಿರುತ್ತಾರೆಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಇರುವ ಸಂಗತಿಗಳನ್ನು ನಾನೇ ವಿವರ ನೀಡಿ ಬರೆಸಿದ್ದು, ಮತ್ತು ಅದರ ಬಗ್ಗೆ ಮಾಹಿತಿ ಇದ್ದರೂ, ಪಂಚನಾಮೆ ಬರೆಯುವ ಸಮಯಕ್ಕೆ ನಾನು ಹಾಜರು ಇರಲಿಲ್ಲ ಮತ್ತು ಅದರಲ್ಲಿ ಇರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ನನ್ನ ಸಮಕ್ಷಮ ಬಡಿಗೆಯನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಐ.ಬಿ.ಹೆಚ್ ವಕೀಲರಿಂದ:</u>**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ

**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**
**<u>ಸಿ. ಸಿ. ನಂ. 850/2023</u>**

ಸಿಡಬ್ಲ್ಯು-01
ಪಿಡಬ್ಲ್ಯು-01

| | |
|---|---|
| ಸಾಕ್ಷಿದಾರರ ಹೆಸರು | ಮಲ್ಲಪ್ಪ ಬಳದವರ |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಬಸಾಪುರ ಗ್ರಾಮ |

**ದಿನಾಂಕ : 13-08-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

1. ಚಾಸಾ-4 ನನ್ನ ಹೆಂಡತಿ, ಚಾಸಾ-2, 3 ರವರ ಪರಿಚಯ ಇದ್ದು, ಅವರು ನನ್ನ ಗ್ರಾಮದವರು ಇರುತ್ತಾರೆ. ಚಾಸಾ-5 ನನ್ನ ಅತ್ತೆ. ಚಾಸಾ-6 ಮತ್ತು 7 ರವರು ನನ್ನ ಪಕ್ಕದ ಮನೆಯವರು ಇರುತ್ತಾರೆ.

2. ಘಟನೆಯು ಸುಮಾರು ಒಂದು ವರ್ಷ 4 ತಿಂಗಳ ಹಿಂದೆ ಬೆಳಗ್ಗೆ 9.00 ಗಂಟೆಗೆ ಆಗಿರುತ್ತದೆ. ಆ ಸಮಯಕ್ಕೆ ಚಾಸಾ-4 ಮತ್ತು 5 ರವರು ಮನೆಯಲ್ಲಿದ್ದು, ನಾನು ಜಮೀನಿನ ಕೆಲಸಕ್ಕೆ ಹೋಗಿದ್ದೆ. ಆ ಸಮಯಕ್ಕೆ ನನ್ನ ಅಣ್ಣ ಬಸಪ್ಪ ಬಳಲದವರ ಮತ್ತು ಆತನ ಮಗ ಷಣ್ಮುಖಪ್ಪ ಬಳದವರರವರು ಚಾಸಾ-4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಜಗಳದಲ್ಲಿ ಆರೋಪಿಯು ಚಾಸಾ-4 ಮತ್ತು 5 ರವರಿಗೆ ಮನೆಯ ವಿಚಾರವಾಗಿ ಬಡಿಗೆಗಳಿಂದ ಹೊಡೆದಿರುತ್ತಾರೆ. ಅದೇ ಸಮಯಕ್ಕೆ ಆರೋಪಿಯು ಷಣ್ಮುಖಪ್ಪ ಮತ್ತು ಬಸಪ್ಪ ರವರು ಚಾಸಾ-4 ಮತ್ತು 5 ರವರಿಗೆ ಜೀವ

ಬೆದರಿಕೆ ಹಾಕಿರುತ್ತಾರೆ. ಜಗಳವನ್ನು ನೋಡಿದ ಅಕ್ಕಪಕ್ಕದ ಮನೆಯವರು ಮಧ್ಯ ಪ್ರವೇಶಿಸಿ ಜಗಳವನ್ನು ಬಿಡಿಸಿರುತ್ತಾರೆ. ಘಟನೆಯಲ್ಲಿ ಗಾಯಗೊಂಡಿದ್ದ ಚಾಸಾ-4 ಮತ್ತು 5 ರವರಿಗೆ ಚಿಕಿತ್ಸೆಗಾಗಿ ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ನಾನೇ ಕರೆದುಕೊಂಡು ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಅವರು ಒಳರೋಗಿಯಾಗಿ 4 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಿದ ನಂತರ ಘಟನೆಗೆ ಸಂಬಂಧಿಸಿದಂತೆ ಆಡೂರು ಪೊಲೀಸ್ ಠಾಣೆಯಲ್ಲಿ ಪಿರ್ಯಾದನ್ನು ದಾಖಲಿಸಿರುತ್ತೇನೆ. ಸದರಿ ಪಿರ್ಯಾದನ್ನು ಘಟನೆ ದಿನವೇ ದಾಖಲಿಸಿರುತ್ತೇನೆ.

3. ಸಾಕ್ಷಿಯು ಪಿರ್ಯಾದನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಪಿರ್ಯಾದನ್ನು ನಿ.ಪಿ-1 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಪಿರ್ಯಾದಿಯಲ್ಲಿ ಬರೆದಿರುವ ಸಂಗತಿಗಳ ಸಂಪೂರ್ಣ ಮಾಹಿತಿ ಇದೆ. ನಾನು ಪಿರ್ಯಾದನ್ನು ದಾಖಲಿಸಿದ ಮರುದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಘಟನಾ ಸ್ಥಳವನ್ನು ನಾನೇ ತೋರಿಸಿದ್ದು, ಆ ಸಮಯಕ್ಕೆ ಚಾಸಾ-2 ಮತ್ತು 3 ರವರು ಹಾಜರಿದ್ದರು. ಘಟನಾ ಸ್ಥಳದಲ್ಲಿ ಪೊಲೀಸರು ಬೆಳಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆ ವರೆಗೆ ಪಂಚನಾಮೆ ಬರೆದಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಘಟನಾ ಸ್ಥಳ ಪಂಚನಾಮೆಯನ್ನು ನಿ.ಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿಯು ಗುರುತಿಸಿದ ದಸ್ತೂರ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇದೆ.

4. ಪಂಚನಾಮೆ ಸಮಯಕ್ಕೆ ಪೊಲೀಸರು ಒಂದು ಬಡಿಗೆಯನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಬಡಿಗೆಯನ್ನು

ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಪಂಚನಾಮೆ ಸಮಯಕ್ಕೆ ಛಾಯಾ ಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಒಂದು ಛಾಯಾ ಚಿತ್ರವನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿ.ಪಿ-3 ಎಂದು ಗುರುತಿಸಲಾಯಿತು. ಘಟನೆಗೆ ಸಂಬಂಧಿಸಿದಂತೆ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದು ಮತ್ತು ಬಸಪ್ಪ ಬಳಲದವರ ವನ್ನು ನೋಡಿದರೆ ಗುರುತಿಸುತೇನೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

1. ಘಟನೆಯು ದಿಃ 29-03-2023 ರಂದು ಬೆಳಗ್ಗೆ 9.00 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಘಟನೆಯಲ್ಲಿ ಆರೋಪಿ ಮತ್ತು ಆತನ ತಂದೆ ಬಸಪ್ಪ ರವರು ಚಾಸಾ-4 ಮತ್ತು 5 ರವರಿಗೆ ಕೈಗಳಿಂದಲೂ ಹಲ್ಲೇ ಮಾಡಿರುತ್ತಾರೆ ಎಂದರೆ ಸರಿ. ಅದೇ ಸಮಯಕ್ಕೆ ಅವರನ್ನು ನೆಲಕ್ಕೆ ಕೆಡವಿ ಕಾಲಿನಿಂದ ಸಿಕ್ಕ ಸಿಕ್ಕಲ್ಲಿ ಒದ್ದಿರುತ್ತಾರೆ ಎಂದರೆ ಸರಿ. ಘಟನೆಗೆ ಸಂಬಂಧಿಸಿದತೆ ಪಿರ್ಯಾದನ್ನು ಜಗಳವಾದ ಮಾರನೇ ದಿನವಾದ ದಿಃ 30-03-2023 ರಂದು ಆಡೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿರುತ್ತದೆ ಎಂದರೆ ಸರಿ.

2. ಘಟನೆಗೆ ಸಂಬಂಧಿಸಿದಂತೆ ನಾನು ಪಿರ್ಯಾದು ನೀಡಿದ ಮರುದಿನವಾದ ದಿಃ 31-03-2023 ರಂದು ನಾನು ತೋರಿಸಿದ ಘಟನಾ ಜಾಗದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 11.00 ರಿಂದ 12.00 ಗಂಟೆವರೆಗೆ ಪೊಲೀಸರು ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ನಾನು ಘಟನೆಗೆ ಸಂಬಂಧಿಸಿದಂತೆ ಆರೋಪಿಯ ತಂದೆಯಾದ ಬಸಪ್ಪ ಬಳಲದವರು ಚಾಸಾ-4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೇ ಮಾಡಿರುತ್ತಾರೆ ಎಂದು ದೂರಿನಲ್ಲಿ ತಪ್ಪು ಮಾಹಿತಿ ನೀಡಿದೆ ಎಂದು

ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾನು ಮರು ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಐ.ಬಿ.ಹೆಚ್ ವಕೀಲರಿಂದ:</u>**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇಲೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**
**ಸಿ. ಸಿ. ನಂ. 850/2023**

ಸಿಡಬ್ಲ್ಯೂ-04
ಪಿಡಬ್ಲ್ಯೂ-03

| | |
|---|---|
| ಸಾಕ್ಷಿದಾರರ ಹೆಸರು | ರೇಣುಕಾ ಬಳದವರ |
| ಗಂಡನ ಹೆಸರು | ಮಲ್ಲಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಬಸಾಪುರ ಗ್ರಾಮ |

**ದಿನಾಂಕ : 13-08-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-1 ನನ್ನ ಗಂಡ, ಚಾಸಾ-5 ನನ್ನ ತಾಯಿ ಮತ್ತು ಚಾಸಾ-6 ಮತ್ತು 7 ರವರ ಪರಿಚಯ ಇರುತ್ತದೆ.

2. ದಿಃ29-03-2023 ರಂದು ಬೆಳಗ್ಗೆ 9.00 ಗಂಟೆ ಸುಮಾರಿಗೆ ನಾನು ಮತ್ತು ನನ್ನ ತಾಯಿ ಚಾಸಾ-5 ರವರು ಮನೆಯಲ್ಲಿ ಇದ್ದೆವು. ಆ ಸಮಯಕ್ಕೆ ನನ್ನ ಗಂಡ ಚಾಸಾ-1 ರವರು ಜಮೀನಿನಲ್ಲಿ ಕೆಲಸಕ್ಕೆ ಹೋಗಿದ್ದರು. ಆಗ ಷಣ್ಮುಖಪ್ಪ ಮತ್ತು ಆತನ ತಂದೆ ಬಸಪ್ಪ ರವರು ನಾವು ವಾಸವಿದ್ದ ಮನೆಯ ಒಳಗಡೆ ಬಂದು, ಸದರಿ ಮನೆಯ ಹಿಸ್ಸೇಯ ವಿಚಾರವಾಗಿ ನನಗ ಮತ್ತು ಚಾಸಾ-5 ರವರಿಗೆ ಹಲವಾರು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ಸದರಿಯವರು ನನ್ನ ಮತ್ತು ಚಾಸಾ-5 ರವರ ಕೈ ಮತ್ತು ಮೈಯನ್ನು ಹಿಡಿದು ಎಳೆದಾಡಿರುತ್ತಾರೆ. ಸದರಿ ಘಟನೆಯಲ್ಲಿ ಷಣ್ಮುಖಪ್ಪ ರವರು ನನಗೆ ಕಾಲಿನಿಂದ ಒದ್ದಿದ್ದು, ಚಾಸಾ-5 ರವರಿಗೆ ಬಡಿಗೆಯಿಂದ ಹಲ್ಲೇ ಮಾಡಿರುತ್ತಾರೆ. ಷಣ್ಮುಖಪ್ಪ ಮತ್ತು

ಆತನ ತಂದೆ ಬಸಪ್ಪ ನನಗೆ ಮತ್ತು ಚಾಸಾ-5 ರವರಿಗೆ ಕೈಗಳಿಂದಲೂ ಹಲ್ಲೇ ಮಾರುತ್ತಾರೆ. ಅವರು ಮುಂದುವರೆದು ನನ್ನನ್ನು ಮತ್ತು ಚಾಸಾ-5 ರವರನು ಜೀವ ಸಹಿತ ಬಿಡುವುದಿಲ್ಲ ಮತ್ತು ಬೆಂಕಿಯಿಂದ ಸುಡುತ್ತೇವೆ ಎಂದು ಜೀವ ಬೆದರಿಕೆ  ಹಾಕಿರುತ್ತಾರೆ. ಜಗಳವನ್ನು ನೋಡಿದ ಚಾಸಾ-6 ಮತ್ತು 7 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ.

3. ಘಟನೆಯಲ್ಲಿ ಗಾಯಗೊಂಡಿದ್ದ ನನ್ನನ್ನು ಮತ್ತು ಚಾಸಾ-5 ರವರನ್ನು ಚಿಕಿತ್ಸೆಗಾಗಿ ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಿಸಿ, 4 ದಿನಗಳ ಕಾಲ ಚಿಕಿತ್ಸೆಯನ್ನು ಪಡೆದಿರುತ್ತೇವೆ.  ನಂತರ ಘಟನೆಗೆ ಸಂಬಂಧಿಸಿದಂತೆ ಆಡೂರು ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರು ಘಟನೆ ಆದ ಮರುದಿನ ಪಿರ್ಯಾದನ್ನು ದಾಖಲಿಸಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಬಡಿಗೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದು, ಆತನ ತಂದೆಯಾದ ಬಸಪ್ಪ ಬಳಲದ ರವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು: ಆರೋಪಿ  ಪರ ಶ್ರೀ  ಐ.ಬಿ.ಹೆಚ್  ವಕೀಲರಿಂದ:**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇಲೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ